I/120019/2021

ಕರ್ನಾಟಕ ಸರಕಾರ

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಆಯುಕ್ತರ ಕಚೇರಿ,
ತಾಂತ್ರಿಕ ಶಿಕ್ಷಣ ಭವನ
ಅರಮನೆ ರಸ್ತೆ, ಬೆಂಗಳೂರು-560001
ದಿನಾಂಕ: 17/08/2021

# ಜ್ಞಾಪನ

ವಿಷಯ: 2021-22ನೇ ಸಾಲಿನಿಂದ ರಾಜ್ಯದ 3ನೇ ಮತ್ತು 4ನೇ ಸೆಮಿಸ್ಟರ್ ಡಿಪ್ಲೊಮಾ ಪ್ರೋಗ್ರಾಂಗಳಿಗೆ C-20 ಪರಿಷ್ಕೃತ ಪಠ್ಯಕ್ರಮಗಳನ್ನು ಅಳವಡಿಸುವ ಬಗ್ಗೆ.

ಉಲ್ಲೇಖ: 1. ಸರ್ಕಾರದ ಪತ್ರ ಸಂ.ಇಡಿ 112 ಟಿಪಿಇ 2019, ದಿನಾಂಕ: 10/08/2020.

2. ಸರ್ಕಾರದ ಪತ್ರ ಸಂ.ಇಡಿ 172 ಟಿಪಿಇ 2020, ದಿನಾಂಕ: 22/12/2020.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಈಗಾಗಲೇ ಉಲ್ಲೇಖ(1)ರ ಸರ್ಕಾರದ ಪತ್ರದಲ್ಲಿ ರಾಜ್ಯದ ಡಿಪ್ಲೊಮಾ ಪ್ರೋಗ್ರಾಂಗಳಿಗೆ 2020-21ನೇ ಸಾಲಿನಿಂದ ಪರಿಷ್ಕೃತ ಪಠ್ಯಕ್ರಮಗಳನ್ನು ಅಳವಡಿಸಲು ಅನುಮತಿಸಲಾಗಿದೆ. ಪರಿಷ್ಕೃತ ಪಠ್ಯಕ್ರಮಗಳ ನಿಯಮಾವಳಿ/ರೂಪುರೇಷೆಗಳನ್ನು ಉಲ್ಲೇಖ(2)ರಲ್ಲಿನ ಸರ್ಕಾರದ ಆದೇಶದಲ್ಲಿ ಪ್ರಕಟಿಸಲಾಗಿದೆ.

ಮುಂದುವರೆದು, ವಿವಿಧ ತಾಂತ್ರಿಕ ಮತ್ತು ಔದ್ಯೋಗಿಕ ಕ್ಷೇತ್ರಗಳಲ್ಲಿನ ವಿಷಯ ಪರಿಣಿತರ ಸಹಯೋಗದಿಂದ ಪರಿಷ್ಕರಿಸಿದ 3ನೇ ಮತ್ತು 4ನೇ ಸೆಮಿಸ್ಟರ್ C-20 ಡಿಪ್ಲೊಮಾ ಪಠ್ಯಕ್ರಮಗಳನ್ನು ಆಯುಕ್ತಾಲಯದ ಜಾಲತಾಣ https://www.dtek.karnataka.gov.in ದಲ್ಲಿ ಪ್ರಕಟಿಸಲಾಗಿದೆ. ಸಂಸ್ಥೆಗಳ ಪ್ರಾಚಾರ್ಯರುಗಳು 2021-22ನೇ ಸಾಲಿನಿಂದ 3ನೇ ಮತ್ತು 4ನೇ ಸೆಮಿಸ್ಟರ್ ಡಿಪ್ಲೊಮಾ ವ್ಯಾಸಂಗದಲ್ಲಿ C-20 ಪರಿಷ್ಕೃತ ಪಠ್ಯಕ್ರಮಗಳನ್ನು ಉಲ್ಲೇಖ(2)ರಲ್ಲಿನ ಸರ್ಕಾರದ ಆದೇಶದಲ್ಲಿ ಪ್ರಕಟಿಸಿರುವ ನಿಯಮಾವಳಿ/ರೂಪುರೇಷೆಗಳಂತೆ ಅಳವಡಿಸಿ, ಕ್ರಮ ವಹಿಸಲು ಸೂಚಿಸಿದೆ. ನಿಗಧಿತ ಪಠ್ಯಕ್ರಮಗಳ ಬೋಧನಾ ಕಾರ್ಯಭಾರಗಳನ್ನು ಉಪನ್ಯಾಸಕರು/ಬೋಧಕರುಗಳಿಗೆ ಹಂಚಿಕೆಮಾಡಲು ಆಯಾ ಸಂಸ್ಥೆಗಳ ಪ್ರಾಚಾರ್ಯರು ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ತಿಳಿಸಿದೆ.

2021-22ನೇ ಸಾಲಿನ 5ನೇ ಸೆಮಿಸ್ಟರ್ ಡಿಪ್ಲೊಮಾ ವ್ಯಾಸಂಗಗಳಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ C-15 ಪಠ್ಯಕ್ರಮಗಳು ಅನ್ವಯಿಸಿದ್ದು, ಸದರಿ ವಿದ್ಯಾರ್ಥಿಗಳಿಗೆ C-15 ಪಠ್ಯಕ್ರಮಗಳ ನಿಯಮಾವಳಿ/ರೂಪುರೇಷೆಗಳು ಅನ್ವಯಿಸುತ್ತವೆ.

ಆಯುಕ್ತರು

ಇವರಿಗೆ:

ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್ ಪ್ರಾಚಾರ್ಯರುಗಳಿಗೆ- ಸೂಕ್ತ ಕ್ರಮಕ್ಕಾಗಿ.

ಪ್ರತಿ:

1. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು- ಸೂಕ್ತ ಕ್ರಮಕ್ಕಾಗಿ.
2. ಜಂಟಿ ನಿರ್ದೇಶಕರು (ಆಡಳಿತ)/ (ಪರೀಕ್ಷೆ)/ (ತನಿಖೆ)/(ಯೋಜನೆ), ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು- ಸೂಕ್ತ ಕ್ರಮಕ್ಕಾಗಿ.
3. ಇ-ಆಡಳಿತ ವಿಭಾಗ- ಇಲಾಖಾ ಜಾಲತಾಣದಲ್ಲಿ ಪರಿಷ್ಕೃತ ಪಠ್ಯಕ್ರಮಗಳ ಜೊತೆ ಪ್ರಕಟಿಸಲು.